ಮಂಡಿಕೇರಿಯಲ್ಲಿ ಹೊಸ ಆಸ್ಪತ್ರೆ ಕಟ್ಟಡ ನಿರ್ಮಾಣ

೧೭೮. ಶ್ರೀ ಡಿ. ಎ. ಚಿಣ್ಣಪ್ಪ (ಮಂಡಿಕೇರಿ).– ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡಿಕೇರಿಯಲ್ಲಿ ಸರಕಾರದ ವತಿಯಿಂದ ೧.೪೦ ಕೋಟಿ ರೂ.ಗಳ ಅಂದಾಜಿನ ಹೊಸ ಆಸ್ಪತ್ರೆ ಕಟ್ಟಡ ನಿರ್ಮಾಣವಾಗುತ್ತಿದೆಯೇ ?

ಆ) ಹಾಗಿದ್ದರೆ ಇಲ್ಲಿಯ ತನಕ ಬಿಡುಗಡೆಯಾದ ಹಣವೆಷ್ಟು ?

ಇ) ಈ ಕಟ್ಟಡ ನಿರ್ಮಾಣವು ಈಗ ಯಾವ ಹಂತದಲ್ಲಿದೆ ?

ಈ) ಈ ಕಟ್ಟಡವು ಯಾವಾಗ ಮುಗಿದು ಜನರ ಬಳಕೆಗೆ ಬರುವುದು ?

ಶ್ರೀ ಹೆಚ್. ಡಿ. ದೇವೆಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು. ಈ ಕೆಲಸದ ಮೊದಲನೆ ಹಂತವಾದ ಹೊರ ರೋಗಿಗಳ ಕಟ್ಟಡದ ಕೆಲಸ ೩೦ ಲಕ್ಷ ರೂ.ಗಳ ಅಂದಾಜಿನ ಕೆಲಸ, ನಿರ್ಮಾಣದಲ್ಲಿದೆ.

ಆ) ಇಲ್ಲಿಯ ತನಕ, ಅಂದರೆ ಜುಲೈ ೧೯೮೭ರ ವರೆಗೆ, ಒಟ್ಟು ರೂ.೨೫,೯೪,೯೯೧ ಹಣ ಖರ್ಚಾಗಿದೆ.

ಇ) ಈ ಕಟ್ಟಡದ ಕೆಲಸಗಳು ಈಗಾಗಲೇ ಮುಗಿಯುಂತಾ ಬಂದಿದ್ದು, ಬಾಗಿಲು ಮತ್ತು ಕಿಟಕಿಗಳನ್ನು ಅಳವಡಿಸಬೇಕಾಗಿದೆ. ಮೇಲ್ಚಾವಣಿಗೆ ಹವಾಮಾನ ನಿರೋಧಕ ಪದರು ಹಾಕಬೇಕಾಗಿದೆ. ನಲ್ಲಿ ನೀರು ಸರಬರಾಜು ಮತ್ತು ನಿರ್ಮಲೀಕರಣ ಕೆಲಸ ಮಾತ್ರ ಆಗಬೇಕಾಗಿದೆ.

ಈ) ಹಣದ ಸೌಲಭ್ಯ ಒದಗಿದಲ್ಲಿ ೧೯೮೭ ಡಿಸೆಂಬರ್ ಮಾಹೆಯ ಅಂತ್ಯದ ಒಳಗೆ ಮುಗಿಸ ಬಹುದು.

ಶ್ರೀ ಡಿ. ಎ. ಚಿಣ್ಣಪ್ಪ.— ಅಧ್ಯಕ್ಷರೆ, ಈ ಹಾಸ್ಪಿಟಲ್ ೪೦೦ ಬೆಡ್ಸ್‌ನ ಹಾಸ್ಪಿಟಲ್. ೨೦೦ ಬೆಡ್ ಹಾಸ್ಪಿಟಲ್ ಡಿಸ್‌ಮೆಂಟಲ್ ಮಾಡಿದ್ದು ೧೯೮೨ರಲ್ಲಿ. ಈವರೆಗೆ ಅದಕ್ಕೆ ಖರ್ಚು ಮಾಡಿರುವುದೂ ೩೦ ಲಕ್ಷ ರೂಪಾಯಿಗಳು ಇದಕ್ಕೆ ಒರಿಜಿನಲ್ ಎಸ್ಟಿಮೇಟ್ ೧ ಕೋಟಿ ೪೦ ಲಕ್ಷ ರೂಪಾಯಿಗಳು. ಆದರೆ ಅಲ್ಲಿ ಜನರನ್ನು ವರಾಂಡಾದಲ್ಲಿ ಹಾಕಿಕೊಂಡು ಆಸ್ಪತ್ರೆ ನಡೆಸುತ್ತಿದ್ದಾರೆ. ಇಷ್ಟು ನಿಧಾನವಾಗಿ ಕೆಲಸ ಮಾಡಲಿಕ್ಕೆ ಕಾರಣ ಏನು ಎಂದೂ ಕೇಳಬಯಸುತ್ತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಸ್ವಾಮಿ, ಇದಕ್ಕೆ ಮುಂಜೂರಾತಿ ಕೊಟ್ಟಿದ್ದುದು ೩೦ ಲಕ್ಷಕ್ಕೆ. ಮಾಸ್ಟರ್‌ಪ್ಲಾನ್ ಸರ್ಕಾರಿ ಒಪ್ಪಿರತಕ್ಕದ್ದು ೧ ಕೋಟಿ ೪೦ ಲಕ್ಷ ರೂಪಾಯಿಗಳಿಗೆ. ಈ ಕಾಮಗಾರಿಯಲ್ಲಿ ೩೦ ಲಕ್ಷ ರೂಪಾಯಿಗಳ ಅಂದಾಜು ಪಟ್ಟಿಗೆ ದಿನಾಂಕ ೧೬–೧೧–೮೧ರ ಆದೇಶ ಸಂಖ್ಯೆ: ಪಿ.ಎ.ಆರ್. ೩೧–೮೧–೨೨ರಲ್ಲಿ ಮುಂಜೂರಾತಿ ಕೊಟ್ಟಿದೆ. ಫಸ್ಟ್ ಸ್ಟೇಜಿಗೆ ೩೦ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದೆ. ಒಟ್ಟು ಮಾಸ್ಟರ್ ಪ್ಲಾನ್ ೧ ಕೋಟಿ ೪೦ ಲಕ್ಷ ರೂಪಾಯಿಗಳಿಗೆ ತಯಾರಾಗಿದೆ. ಅಡಿಷನಲ್ ಗ್ರ್ಯಾಂಟ್ ಸಿಕ್ಕಿದರೆ ಮಾರ್ಚ್ ೮೮ಕ್ಕೆ ಮುಗಿಸುವುದಕ್ಕೆ ಸಾಧ್ಯವಾಗ ಬಹುದು. ಇರತಕ್ಕ ಗ್ರ್ಯಾಂಟಿಗೆ ಇನ್ನೂ ಒಂದು ಲಕ್ಷ ಬೇಕಾಗಿದೆ. ಇಷ್ಟನ್ನು ದೊರಕಿಸಿಕೊಂಡರೆ ಮಾರ್ಚ್ ೮೮ಕ್ಕೆ ಮುಗಿಸಬಹುದು ಎಂದು ನನಗೆ ಬಂದಿರತಕ್ಕ ವರದಿ.

ರಾಜ್ಯದಲ್ಲಿರುವ ಏತ ನೀರಾವರಿ ಬಗ್ಗೆ

೨೬೯. ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).— ಮಾನ್ಯ ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಏತ ನೀರಾವರಿ ಕೆಲಸಗಳನ್ನು ಇದುವರೆಗೆ ಸರ್ಕಾರವು ತೆಗೆದುಕೊಂಡಿದೆ ?

ಅ) ಸದರಿ ಕೆಲಸಗಳಿಗಾಗಿ ತೆಗುಲಿದ ಖರ್ಚೆಷ್ಟು ?

ಇ) ಈ ಪೈಕಿ ಗುಲ್ಬರ್ಗಾದಲ್ಲಿ ಯಾವ ಯಾವ ಏತ ನೀರಾವರಿ ಕೆಲಸಗಳನ್ನು ತೆಗೆದು ಕೊಳ್ಳಲಾಗಿದೆ ?

ಈ) ಜೇವರ್ಗಿ ತಾಲ್ಲೂಕಿಂ ಇಟಗಾ ಯೋಜನೆಯು ಕೆಲಸವು ಯಾವ ಹಂತದಲ್ಲಿದೆ ?

ಉ) ಹಾಗೂ ಎಷ್ಟು ಎಕರೆ ಜಮೀನಿಂ ನೀರಾವರಿ ಆಗಬಹುದು ?

ಶ್ರೀ ಕೆ. ಕೃಷ್ಣಮೂರ್ತಿ (ಸಣ್ಣ ನೀರಾವರಿ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು).—

ಅ) ೪೯೬.

ಆ) ೨೫೪೬.೬೧ ಲಕ್ಷ ರೂ.ಗಳು.

ಇ) ಪಟ್ಟಿಯನ್ನು ಲಗತ್ತಿಸಲಾಗಿದೆ.

ಈ) ಎಂಕ್ಕೆಲ್ಲ ಕೆಲಸಗಳು ಮುಗಿದಿದ್ದು, ಕಾಲುವೆ ಕೆಲಸ ಮುಗಿಯಬೇಕಾಗಿದೆ.

ಉ) ೨೪೭೦ ಎಕರೆ (೯೮೮ ಹೆಕ್ಟೇರು).

STATEMENT—I

I. I. Schemes Working in Gulburga District

Sl. No.	Taluk	Name of I.I. Scheme	Estimated cost Rs. in lakhs.	Ayacut as per sanctioned Estimate (in Hect.)	Remarks
		I. I. I. SCHEMES WORKING			
1	Gulburga	1. I.I.S. Ankalga	2.66	272	Working condition
2	Gulburga	2. I.I.S. Ferozabad	3.68	372	Working condition
3	Jewargi	1. I.I.S. Kattisangavi	4.00	227	Working condition
4	Jewargi	2. I.I.S. Nelogi	2.61	248	Working condition
5	Jewargi	3. I.I.S. Itga Sangam	14.47	1000	Working condition
6	Jewargi	4. I.I.S. Malla 'K'	2.60	130	Working condition
7	Afzalpur	1. I.I.S. Seshgirwadi	2.44	212	Working condition
8	Afzalpur	2. I.I.S. Gour 'B'	2.52	205	Working condition
9	Afzalpur	3. I.I.S. Ghatrarga	7.38	470	Working condition
10	Afzalpur	4. L.I.S. Diksanga	2.75	206	Working condition
11	Afzalpur	5. I.I.S. Deval Ghangapur	4.37	323	Working condition
12	Afzalpur	6. I.I.S. Bandarwad	6.36	633	Working condition
13	Afzalpur	7. L.I.S. Chowdapur	1.00	81	Working condition
14	Alland	1. I.I.S. Kamalanagar	1.74	120	Working condition
15	Sedam	1. I.I.S. Malked	1.62	184	Working condition

1	2	3	4	5	6
16	Chitapur	1. I.I.S. Margole	2.40	322	Working condition
17	Chitapur	2. I.I.S. Kalgi	0.93	140	Working condition
18	Chitapur	3. I.I.S. Sotuh	0.90	160	Working condition
19	Yadgir	1. 1. I.I.S. Kollpur	4.50	205	Working condition
20	Yadgir	2. I.I.S. Tumkur	1.60	205	Working condition
21	Shahapur	1. I.I.S. Sirwal	4.14	246	Working condition
22	Shahapur	2. I.I.S. Aikur	4.77	295	Working condition
23	Shahapur	3. I.I.S. Ankasagur	2.60	162	Working condition
24	Shahapur	4. I.I.S. Gudihall	3.48	225	Working condition
25	Chincholi	1. I.I.S. Chancholi	1.34	225	Working condition
26	Chincholi	2. I.I.S. Anwar	1.20	180	Working condition
			88.06	6,793.00	

STTEMENT—II

I. I. Schemes not working in Gulburga District.

Sl. No:	Taluk	Name of I.I. Scheme	Estimated cost Rs. in lakhs	Ayacut as per sanctioned Estimated (in Hect.)	Remarks
1	2	3	4	5	6
1	Gulburga	I.I.S. Mahagon	1.50	145	Due to non availability of water in Bennithora nala.
2	Alland	I.I.S. Shakapur	1.22	200	Due to non availability of water in River Amerja.
3	Shahapur	1. I.I.S. Gulsaram	1.67	140	Due to repairs to arising main and pumping machinery. Repair Work taken up.
4	Shahapur	2. I.I.S. Darshanapur	0.65	371	Due to failure of nala source the Scheme is abondoned.
5	Shahapur	3. I.I.S. Khandalli	3.78	361	Canala Works are held up for want of land. Land acquisition proposal sent to special Deputy Commissioner.
6	Shahapur	4. I.I.S. Chatnalli	6.11	676	Canal work held up for want of land. 6(1) published on 29-3-84. Further action under process.
			14.93	1559	

STATEMENT—III

I. I. Schemes under execution

Sl. No.	Taluk	Name of I.I. Scheme	Estimated cost Rs. in lakhs.	Ayacut as per sanctionr Estimate in Hect.	Budget provisions for 1987–88 in Rs. in lakhs.	Remarks
1	2	3	4	5	6	7
1	Afzalpur	1. I.I.S. Bhosga	6.81	322	0.10	Work in progress
2	Afzaldur	2. I.I.S. Shivpur	6.82	300	0.20	Work in progress
3	Afzalpur	3. I.I.S. Chimalli	6.50	455	0.20	Work in progress
4	Yadgir	1. I.I.S. Lingeri	4.45	205	0.20	Work in progress
5	Yndgir	2. I.I.S. Hedgimuadra	9.40	1434	0.10	Work in progress
6	Yadgir	3. I.I.S. Chiganoor	7.145	799	0.20	Work in progress
		R.E.	15.90			
7	Shahapur	1. I.I.S. Kodal	4.33	230	—	Work in progress
8	Chincholli	1. I.I.S. Kanchked	3.67	180	0.20	Work in progress
		TOTAL	57.88	3985		

ಶ್ರೀ ಕೆ. ಬಿ. ಶಾಣಪ್ಪ.—ಅಧ್ಯಕ್ಷರೆ, ಈ ಪಟ್ಟಿ ಪ್ರಕಾರ ಸುಮಾರು ೨೬ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ನಮ್ಮ ಜಿಲ್ಲೆಯಲ್ಲಿ ತೆಗೆದುಕೊಂಡಿದ್ದಾರೆ ಆದರೆ ನಿಜವಾಗಿ ಹೇಳಬೇಕಾದರೆ ಈ ಲಿಸ್ಟ್‌ನಲ್ಲಿರತಕ್ಕ ಒಟ್ಟು ೧೦ ತಾಲ್ಲೂಕುಗಳಲ್ಲಿ ಅಫಜಲ್‌ಪುರ, ಜೇವರ್ಗಿ, ಚಿಂಚೋಳಿ ಬಿಟ್ಟರೆ ಉಳಿದ ೭ ತಾಲ್ಲೂಕುಗಳಲ್ಲಿ ಸ್ಕೀಮ್‌ಗಳನ್ನು ತೆಗೆದುಕೊಂಡಿಲ್ಲ. ಇದಕ್ಕೆ ಪೊಲಿಟಿಕಲ್ ಕಾರಣವೋ ಏನು ? ಭೀಮಾ ನದಿ ಹರಿಯುವ ನಮ್ಮ ಕ್ಷೇತ್ರದಲ್ಲಿ ಲಿಫ್ಟ್ ಇರಿಗೇಷನ್‌ಗೆ ಪೊಟೆನ್‌ಷಿಯಾಲಿಟಿ ಇದೆ ದಯಮಾಡಿ ಸರ್ವೆ ಮಾಡಿ ಎಲ್ಲಿ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸಾಧ್ಯವಿದೆ ಅಲ್ಲಿ ತೆಗೆದುಕೊಳ್ಳುತ್ತೀರಾ ? ಇಟಗಾ ಸ್ಕೀಂ ಆಗಿ ೧೫ ವರ್ಷವಾಗಿದೆ. ೧೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನೂ ಎಷ್ಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಈ ಕೆಲಸವಾಗುತ್ತದೆ ? ಕೆನಾಲ್ ವರ್ಕ್‌ಗೆ ೧೯೮೭ರ ಬಜೆಟ್‌ನಲ್ಲಿ ಹಣ ಇಟ್ಟಿದ್ದೀರಾ ? ಇಡದಿದ್ದರೆ ಯಾವುದಾದರೂ ರೀತಿಯಿಂದ ಪೂರ್ತಿ ಕೆಲಸ ಮಾಡಿ ಇರಿಗೇಷನ್ ಮಾಡಲಿಕ್ಕೆ ಅನುವು ಮಾಡಿಕೊಡುತ್ತೀರಾ ?

ಶ್ರೀ ಎಚ್.ಡಿ. ದೇವೇಗೌಡ.—ಇಲ್ಲಿ ಡಿಸ್ಕ್ರಿಮಿನೇಷನ್ ಪ್ರಶ್ನೆ ಇಲ್ಲ. ಕಾರಣ ಇಷ್ಟೆ, ನಾನಿ ಕೊಟ್ಟಿರುವ ಉತ್ತರದಲ್ಲಿ ಸ್ಟೇಟ್‌ಮೆಂಟ್–೨ನ್ನು ನೋಡಿದರೆ ಗೊತ್ತಾಗುತ್ತದೆ. ಗುಲ್ಬರ್ಗದಲ್ಲಿ ಐ.ಐ. ಸ್ಕೀಂ, ಮೆಹಗಾಂ ಇದಕ್ಕೆ "due to non–availability of water in Bennithora nala." ಎಂದು ಹೇಳಿದೆ. ಈಗ ನಾಲೆಗಳಲ್ಲಿ ಸಿಗತಕ್ಕ ನೀರಿನ ಪ್ರಮಾಣ ಕಡಿಮೆಯಾಗಿರುವುದರಿಂದ ಇವತ್ತು ಕೆಲಸ ಮಾಡಲಿಕ್ಕೆ ಆಗಲಿಲ್ಲ ಎಂಬುದಾಗಿ ಹೇಳಿದ್ದೇನೆ ಅನೇಕ ಕಡೆ ಲಿಫ್ಟ್ ಇರಿಗೇಷನ್ ಸ್ಕೀಂ ಬಗ್ಗೆ ಕೋರಿಕೆ ಇದ್ದರೂ ಬಳಸತಕ್ಕ ನೀರಿನ ಪ್ರಮಾಣ ಏನಿದೆ ಅದಕ್ಕನುಗುಣವಾಗಿ ಹೊಸ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಪರಿಶೀಲನೆ ಮಾಡಬೇಕಾಗುತ್ತದೆ. ಇದರಲ್ಲಿ ವ್ಯತ್ಯಾಸ ಏನೂ ಇಲ್ಲ. ಇದರಲ್ಲಿ ಡಿಸ್ಕ್ರಿಮಿನೇಷನ್ ಪ್ರಶ್ನೆ ಉದ್ಭವಿಸುವುದಿಲ್ಲ. ಇಟಗಾ ಯೋಜನೆ ಬಗ್ಗೆ ಹೇಳಿದ್ದಾರೆ. ಇದಕ್ಕೆ ಹೆಚ್ಚು ಹಣ ಒದಗಿಸಿಕೊಟ್ಟು ಕೆಲಸ ಮುಗಿಸುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆ.

ಶ್ರೀ ಧರ್ಮಸಿಂಗ್.—ಕೆಲವು ಕಡೆ ನೀರಿನ ತೊಂದರೆ ಇದೆ, ಕೆಲವು ಕಡೆ ಸ್ಕೀಮ್ ಸರಿಯಾಗಿ ಆಗುತ್ತಿಲ್ಲ ಎಂದು ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಎಷ್ಟು ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಗುಲ್ಬರ್ಗದಲ್ಲಿ ತೆಗೆದುಕೊಂಡಿದ್ದೀರೋ ಅದನ್ನು ಮುಗಿಸತಕ್ಕದ್ದು ಸರ್ಕಾರದ ಕರ್ತವ್ಯ ಇಟಗಾ ಲಿಫ್ಟ್ ಇರಿಗೇಷನ್ ಸ್ಕೀಂ ನನ್ನ ತಾಲ್ಲೂಕಿನಲ್ಲಿ ಬರುತ್ತದೆ. ಅದು ಪ್ರಾರಂಭವಾಗಿದು ೧೯೭೩ರಲ್ಲಿ ಪ್ರಾರಂಭವಾಗಿ ೧೫ ವರ್ಷ ಆಯಿತು. ಇನ್ನೂ ವರೆಗೆ ಕಂಪ್ಲೀಟ್ ಆಗಿಲ್ಲ. ಮುಗಿಸಲು ಇನ್ನೂ ಎಷ್ಟು ವರ್ಷ ಬೇಕು ? ಒಂದು ಲಿಫ್ಟ್ ಇರಿಗೇಷನ್ ಸ್ಕೀಮಿಗೆ ೧೪–೧೫ ವರ್ಷ ಆದರೆ ಎಲ್ಲಾ ಸ್ಕೀಂಗಳನ್ನು ಮುಗಿಸುವುದಕ್ಕೆ ಎಷ್ಟು ವರ್ಷ ಬೇಕಾಗುತ್ತದೆ? ತಾವೇ ಒಂದು ಸ್ಕೀಮ್ ಇನ್ಯಾಗ್ಯುರೇಷನ್ ಮಾಡಿದ್ದೀರಿ.

ಅಧ್ಯಕ್ಷರು.—ಭಾಷಣ ಬೇಡ. ತಾವು ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಧರ್ಮಸಿಂಗ್.—ಸ್ವಾಮಿ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಈ ಯೋಜನೆಯನ್ನು ಹಾಕಿದ್ದೀರಿ. ಅದಕ್ಕಾಗಿ ತಮಗೆ ತುಂಬಾ ಥ್ಯಾಂಕ್ಸ್. ಈ ಯೋಜನೆ ೧೫ ವರ್ಷಗಳ ಹಿಂದೆ ಪ್ರಾರಂಭವಾದಂದು. ಆದ್ದರಿಂದ ಇದನ್ನು ಪೂರ್ಣಗೊಳಿಸುವುದಕ್ಕೆ ಇನ್ನೂ ಹಣವನ್ನು ಕೊಡಬೇಕಾಗಿದೆಯೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಸರ್ಕಾರದಿಂದ ಬಹಳ ವಿಳಂಬವಾಗಿದೆ. ಆದ್ದರಿಂದ ಈ ಯೋಜನೆಯನ್ನು ಆದಷ್ಟುಬೇಗ ಪೂರ್ಣಗೊಳಿಸಲು ಸರ್ಕಾರದಿಂದ ಹಣವನ್ನು ತಕ್ಷಣ ಬಿಡುಗಡೆ ಮಾಡುತ್ತೀರಾ ಎನ್ನುವ ಬಗ್ಗೆ ಸ್ಪಷ್ಟ ಉತ್ತರವನ್ನು ಕೊಡಿಸಬೇಕು.

ಶ್ರೀ ಹೆಚ್.ಡಿ. ದೇವೇಗೌಡ,—ಲಿಫ್ಟ್ ಇರಿಗೇಷನ್ ಸ್ಕೀಂಗಳಮ್ಮ ನಾವು ಯಾವು ಯಾವುದನ್ನು ಮಂಜೂರು ಮಾಡಿದ್ದೇವೆ ಅವುಗಳನ್ನೆಲ್ಲಾ ಪೂರ್ತಿಗೊಳಿಸಬೇಕಾದದ್ದು ಸರ್ಕಾರದ ಜವಾಬ್ದಾರಿ. ಅದು ಎಷ್ಟೇ ವರ್ಷಗಳ ಹಿಂದೆ ಮಂಜೂರಾಗಿದ್ದರೂ ಕೂಡ ಆದಕ್ಕೆ ನಾವು ಹಣವನ್ನೂ ಕೊಡಲೇ ಬೇಕಾಗುತ್ತದೆ. ಜೇವರ್ಗಿ ಯೋಜನೆಯಂದು ೧೪.೪೭ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಕಾಸ್ಟ್ ಇದೆ. ಇದು ೧ ಸಾವಿರ ಎಕರೆ ಪ್ರದೇಶಕ್ಕೆ ನೀರು ಕೊಡುವಂಥಾದ್ದು. ಇದು ವರ್ಕಿಂಗ್ ಕಂಡೀಷನ್‌ನಲ್ಲಿದೆಯೆಂದು ಕಾಂಟೆಪ್ಲೇಟ್ ಮಾಡಿ ಹೇಳಿದ್ದಾರೆ. ನೀರಿನ ವಿತರಣೆ ಕೆಲಸ ಇನ್ನೂ ಮುಗಿದಿಲ್ಲವೆಂದೂ ಹೇಳಿದ್ದೀರಿ. ನಿಮ್ಮ ಕ್ಷೇತ್ರದ ಬಗ್ಗೆ ನೀವು ಹೇಳಿದ್ದೀರಿ ಅಲ್ಲಿ ನೀರಿನ ಡಿಸ್ಟ್ರಿಬ್ಯೂಷನ್ ಸಿಸ್ಟಂ ಇನ್ನೂ ಆಗಿಲ್ಲವೆಂಬುದು ನನ್ನ ಗಮನಕ್ಕೆ ಬಂದಿಲ್ಲ. ಈ ವಿಚಾರವನ್ನು ನಾನು ಪರಿಶೀಲಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇದೇ ಸಮಯದಲ್ಲಿ ನಾನು ಇನ್ನೊಂದು ವಿಚಾರವನ್ನೂ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ ಮಾನ್ಯ ಸದಸ್ಯರೂ, ನಾನೂ ಹೋಗಿ ಒಂದು ಸ್ಕೀಂನ್ನು ಪ್ರಾರಂಭ ಮಾಡಿ ಬಂದಿದ್ದೇವೆ. ಅದರ ಕೆಲಸವನ್ನು ಲ್ಯಾಂಡ್ ಆರ್ಮಿಯವರು ವಹಿಸಿಕೊಂಡಿದ್ದಾರೆ. ಅದಕ್ಕೆ ಬೇಕಾದ ಹಣವನ್ನು ಕೊಡುವ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಂಡಿದೆ. ಆಲ್ಲಿ ಪಂಪ್ ಫಿಕ್ಸ್ ಮಾಡುತ್ತಿದ್ದಾರೆ. ಆದಕ್ಕೆ ಒಂದು ಓವರ್ ಹೆಡ್ ಟ್ಯಾಂಕ್‌ನ್ನು ಹಾಕಿದ್ದಾರೆ. ಎಸ್ಟಿಮೇಟ್ ಮಾಡಿದ್ದಾರೆ. ಈ ವಿಚಾರವನ್ನು ಆ ದಿವಸ ಅವರು ಆ ಸಭೆಯಲ್ಲೇ ಹೇಳಿದ್ದಾರೆ.

ಶ್ರೀ ಧರ್ಮಸಿಂಗ್.—ಹಿಂದೆ ಎಸ್ಟಿಮೇಟ್ ಮಾಡುವಾಗ ತಪ್ಪಾಗಿ ಮಾಡಿದ್ದರಿಂದ ಈಗ ಆ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ ಆದ್ದರಿಂದ ಇದನ್ನು ಇಷ್ಟಕ್ಕೇ ನಿಲ್ಲಿಸಿಬಿಡುತ್ತೇವೆಂದು ಆ ಸಭೆಯಲ್ಲೇ ಹೇಳಿದ್ದಾರೆ ಈಗ ಇದನ್ನು ರೀಕಾಸ್ಟ್ ಮಾಡಬೇಕೋ ಅಥವಾ ಲ್ಯಾಂಡ್ ಆರ್ಮಿಯವರೇ ಮುಂದುವರಿಸಬೇಕೋ ಎಂಬುದನ್ನು ಯೋಚನೆ ಮಾಡಬೇಕಾಗಿದೆ.

ಶ್ರೀ ಕೆ.ಬಿ. ಶಾಣಪ್ಪ.—ಸ್ವಾಮಿ, ಈ ಯೋಜನೆ ವರ್ಕಿಂಗ್ ಕಂಡೀಷನ್ ಸ್ಥಿತಿಯಲ್ಲಿದೆಯೆಂದು ಹೇಳಿದ್ದೀರಿ. ಆದರೆ ಆಲ್ಲಿ ಒಂದು ಎಕರೆಗೂ ಕೂಡ ನೀರನ್ನು ಕೊಟ್ಟಿಲ್ಲ. ಲಿಫ್ಟ್ ಇರಿಗೇಷನ್ ಆಗಿದೆ ಆದರೆ ಜನರು ಆದರಿಂದ ಇದುವರೆಗೂ ನೀರನ್ನು ಉಪಯೋಗ ಮಾಡುತ್ತಿಲ್ಲ. ಸಂಮಾರು ೮–೧೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಮೊದಲನೆಯ ಹಂತದ ಕೆನಾಲ್ ಕೆಲಸ ಆಗಿದೆ ಇದರಿಂದ ರೈತರಿಗೆ ನೀರನ್ನು ಒದಗಿಸಿಕೊಡಲು ವ್ಯವಸ್ಥೆ ಮಾಡುತ್ತೀರಾ ? ಇಟಗಾದ್ದೂ ಕೂಡ ಇದೇ ರೀತಿ ಆಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನಕೊಟ್ಟು ಆದಷ್ಟುಬೇಗ ಹಣವನ್ನು ಬಿಡುಗಡೆ ಮಾಡಿ ಬರುವ ಡಿಸೆಂಬರ್ ತಿಂಗಳೊಳಗಾಗಿ ಈ ಸ್ಕೀಂನ್ನು ಪೂರೈಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ, ಮಾಹಿತಿಯನ್ನು ತರಿಸಿಕೊಂಡು ಅವಶ್ಯಕತೆ ಇದ್ದರೆ ಈ ಕೆಲಸ ಮಾಡಿಸುವುದಕ್ಕೆ ನಾನೂ ಆದೇಶವನ್ನು ಕೊಡುತ್ತೇನೆ.

ರಾಜ್ಯದ ಸರ್ಕಾರಿ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಬೋಧಕ ಹುದ್ದೆಗಳು ಖಾಲಿ ಇರುವುದು.

೯೧. ಶ್ರೀ ಎ. ಕೃಷ್ಣಪ್ಪ(ವರ್ತೂರು).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಸರ್ಕಾರಿ ಪ್ರೌಢಶಾಲೆ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಎಷ್ಟು ಬೋಧಕ ಹುದ್ದೆಗಳು ಖಾಲಿ ಇವೆ ?

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಇ) ರಾಜ್ಯದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಎಷ್ಟು ಬೋಧಕೇತರ ಹುದ್ದೆಗಳು ಖಾಲಿ ಇವೆ.

ಈ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಬಿ. ಸೋಮಶೇಖರ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು).—

ಅ. ೧. ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳ ಸಂಖ್ಯೆ : ೪೫೩ (ಇದರಲ್ಲಿ ೩೫೬೫ ಗುತ್ತಿಗೆ ಆಧಾರದ ನೌಕರರು ಕೆಲಸ ಮಾಡುತ್ತಿದ್ದಾರೆ)

೨. ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆ ಸಂಖ್ಯೆ ೫೬೦೫

೬೯೮೮

(ಇದರಲ್ಲಿ ೩೭೨೬ ಗುತ್ತಿಗೆ ಆಧಾರದ ನೌಕರರು ಕೆಲಸ ಮಾಡುತ್ತಿದ್ದಾರೆ)